**KARNATAKA LOKAYUKTA**

No.UPLOK-2/DE/155/2018/ARE-16
*(Encl: Recommendation & original Report of Inquiry Officer with connected records)*

Dr.B.R.Ambedkar Veedhi,
Multi Storied Building,
Bengaluru,
dated: 12/02/2021.

**To,**

Smt.Uma Mahadevan, I.A.S.,
Principal Secretary to Government
Rural Development and
Panchayath Raj Department,
Multi Storied Buildings,
Bengaluru 560 001.

Respected Madam,

**Sub :** Departmental inquiry against Sri.Samiulla, the then Secretary, Matada Kurubahatti Grama Panchayath, Chitradurga Taluk, Chitradurga district (Presently working as Grade-2 Secretary, Challakere Taluk, Chitradurga Dist. -Reg.

Ref: Government Order No. ಗ್ರಾಅಪ 07 ಗ್ರಾಪಂಕಾ 2018 Bengaluru dated 18/01/2018.

*****

With Reference to the above, I am directed to forward herewith the recommendation of Hon'ble Uplokayukta, State of Karnataka, dated 10.02.2021 along with the report of inquiry Officer and relevant records as noted below:

**INDEX**

| Sl. No. | Particulars of Documents | Page Nos. |
|---|---|---|
| | Recommendation dated 10/02/2021 of Hon'ble Upalokayukta along with inquiry report | One sealed cover |
| **File 1** | Order Sheet File (Original). | 1-18 |
| **File 2** | **Documents containing :** | |

18.2.21

| | | |
|---|---|---|
| | I. 12(3) report of Hon'ble Upalokayukta-II, dated: 18/12/2017 (xerox).<br>II. Government Order No. ಗ್ರಾಅಪ 07 ಗ್ರಾಪಂಕಾ 2018, ಬೆಂಗಳೂರು, ದಿನಾಂಕ 18/01/2018. (xerox).<br>III. Corrigendum dated 02.03.2018. (Xerox)<br>IV. Nomination order No: Uplok-2/DE/66/2015 Bengaluru, dated: 22/03/2018 of Hon'ble Upalokayukta-II, Bangalore (Xerox) | 19-22<br>23-26<br>27<br>28-29 |
| | V. Articles of charges dtd.04/05/2018 along with covering letter of ARE-11. (Original) | 30-37 |
| | VI. First Oral Statement dtd:04/06/2018 (original) | 38 |
| **File 3** | **Witness examined on behalf of the Disciplinary Authority** | |
| | **PW-1**: Sri. M. Maheshwarappa dt. 20/05/2019 (original) | 39-42 |
| | **PW-2:** Sri. N.N. Keshwamurthi the then Police Inspector, Karnataka Lokayukta, Chitradurga dt. 23/09/2019. (Original) | 43-48 |
| | **PW-3:** Sri Virupaksha Vadeyar, Sited Witness dt: 28/12/2020. (Original) | 49-50 |
| **File 4** | **Documents marked on behalf Disciplinary Authority (Ex.P1 to Ex.P.21)** | |
| | **Ex.P-1:** Complaint of complainant dated 28/02/2015 and connected document. (Original) | 51 |
| | **Ex.P-2:** Form No. I (Complaint) dated 28/02/2015 (Original). | 52-53 |
| | **Ex.P-3 :** Form No. II (Affidavit) dated 27/02/2015 (Original). | 54 |

| | | |
|---|---|---|
| | **Ex.P-4:** Along with complaint complainant submitted documents ( 4 sheets) (xerox). | 55-58 |
| | **Ex.P-5:** Rejoinder dt: 28/03/2016 (Original) | 59-60 |
| | **Ex.P-6**: Letter of DGO addressed Police Inspector, Lokayukta, Chitradurga dt: 09/06/2017 regarding encorchment. (Original) | 61 |
| | **Ex.P.7:** Letter of DGO addressed to Police Inspector Lokayukta Chitradurga dt: 12/07/2017 regarding re-Sy. 61 M.R. Nagar. (Original) | 62 |
| | **Ex.P.8:** Letter of DGO addressed Police Inspector, Lokayukta, Chitradurga dt: 08/08/2017 regarding spot inspection. (Original) | 63 |
| | **Ex.P.9**: Statement of Sri Samiulla dt: 04/09/2017 (original) | 64 |
| | **Ex.P.10**: Xerox Photo taken at the time of Sy (2 Sheets) . (Xerox) | 65-66 |
| | **Ex.P.11**: Investigation report of IO dt: 09/10/2017 (Original) | 67-69 |
| | **Ex.P.12**: Letter of DGO addressed to Police Inspector, Lokayukta, Chitradurga regarding spot inspection in M.R. Nagar. (Original) | 70 |
| | **Ex.P.13**: Certified copy of the notice by the DGO to Shakila Kom Khalanadarsab(Certified Copy) | 71 |
| | **Ex.P.14**: Certified copy of the receipt to Smt. Shakila regarding har Khatha (Certified Copy) | 72 |
| | **Ex.P.15**: Certified copy of the receipt regarding collection of tax (Certified Copy) | 73 |
| | **Ex.P.16**: Certified copy of the License to construct House (Certified Copy) | 74 |
| | **Ex.P.17**: Certified copy of the House Tax receipt pertains to Smt. Shakila. (Certified Copy) | 75 |
| | **Ex.P.18**: Certified copy of the Notice dt: 03/08/2017 to Murgesh regarding vacating is petty shop. (Certified Copy) | 76 |

| | | |
|---|---|---|
| | **Ex.P.19**: Certified copy of the Notice to Smt. Premakka regarding site No. 599. (Certified Copy) | 77 |
| | **Ex.P.20 & 21**: 2 Attested copy of Panchayath proceedings (Attested copies) | 78-80 |
| **File 6** | **Documents marked on behalf of the DGOs** | |
| | **Nil** | |

Yours faithfully,

(Usharani)
Registrar,
Karnataka Lokayukta,
Bengaluru.

Copy to the Addl.Registrar of Enquiries-16, Karnataka Lokayukta, Bengaluru., for information and further necessary action.

## KARNATAKA LOKAYUKTA

No.UPLOK-2/DE.155/2018/ARE.16

Multi Storied Building,
Dr. B.R. Ambedkar Veedhi,
Bengaluru-560 001.
Dated 10.02.2021.

### RECOMMENDATION

Sub:- Departmental inquiry against Shri Samiulla, the then Secretary, Matada Kurubahatti Grama Panchayath, Chitradurga Taluk and District - reg.

Ref:- 1) Proceedings Order No. RDP 07 GPS 2018 dated 18.01.2018 and corrigendum dt.02.03.2018.

2) Nomination order No. UPLOK-2/DE.155/2018 dated 22.03.2018 of Upalokayukta, State of Karnataka.

3) Inquiry report dated 09.02.2021 of Additional Registrar of Enquiries-16, Karnataka Lokayukta, Bengaluru.

~~~~~

The Government by its order dated 18.01.2018 and corrigendum dt.02.03.2018 initiated the disciplinary proceedings against Shri Samiulla, the then Secretary, Matada Kurubahatti Grama Panchayath, Chitradurga Taluk and District, [hereinafter referred to as Delinquent Government Official, for short as 'DGO'] and entrusted the departmental inquiry to this Institution.
~~~~~

2. This Institution by Nomination Order No. UPLOK-2/DE.155/2018 dated 22.03.2018 nominated Additional Registrar of Enquiries-11, Karnataka Lokayukta, Bengaluru, as the Inquiry Officer to frame charges and to conduct departmental inquiry against DGO for the alleged charge of misconduct, said to have been committed by him. Subsequently, by order dated 07.02.2019, Additional Registrar of Enquiries.16, Karnataka Lokayukta, Bengaluru, was re-nominated as the Inquiry Officer to continue the said departmental inquiry against DGO.

3. The DGO Shri Samiulla, the then Secretary, Matada Kurubahatti Grama Panchayath, Chitradurga Taluk and District, was tried for the following charges :-

> "**ಮೊದಲನೆಯದಾಗಿ:- ಆಪಾದಿತ ಸರ್ಕಾರಿ ನೌಕರರಾದ ಸಮಿವುಲ್ಲಾ ಆದ ನೀವು,** ಚಿತ್ರದುರ್ಗ ಜಿಲ್ಲೆಯ ಮಠದ ಕುರಬಹಟ್ಟಿ ಗ್ರಾಮ ಪಂಚಾಯತಿಯ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿಕೊಂಡಿದ್ದ ಅವದಿಯಲ್ಲಿ ಮಠದ ಕುರುಬಹಟ್ಟಿ ಗ್ರಾಮದಲ್ಲಿ ಶ್ರೀಮತಿ ಪ್ರೇಮಕ್ಕ ಕೋಂ ರಾಮಣ್ಣ ಜಂಟಿ ಎಸ್.ಆರ್. ಕರಿಯಪ್ಪ ಬಿನ್ ರುದ್ರಪ್ಪ ರವರು ಅವರ ಮನೆಯ ಹಿಂಭಾಗದಲ್ಲಿ ಸರ್ಕಾರಿ ಶಾಲೆಯ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದನ್ನು ಮತ್ತು ಡಬ್ಬ ಅಂಗಡಿಯ ಮುರುಗೇಶಪ್ಪ ರವರು ಸರ್ಕಾರಿ ಶಾಲೆಯ ಅವರಣ ಗೋಡೆಯನ್ನು ಒತ್ತುವರಿ ಮಾಡಿಕೊಂಡು ಅಂಗಡಿಯನ್ನು ಇಟ್ಟಿರುವುದನ್ನು ತೆರವುಗೊಳಿಸಲು ನೀವು ಯಾವುದೇ ಕ್ರಮವನ್ನು ಕೈಗೊಳ್ಳಲು ವಿಫಲರಾಗಿ ಆ ಮೂಲಕ ನೀವು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ,

ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ (i) ರಿಂದ (iii) ರಡಿಯಲ್ಲಿ ಕರ್ತವ್ಯಲೋಪವನ್ನೆಸಗಿರುತ್ತೀರಿ.

**ಎರಡನೆಯದಾಗಿ:- ಆಪಾದಿತ ಸರ್ಕಾರಿ ನೌಕರರಾದ ಸಮಿವುಲ್ಲಾ ಆದ ನೀವು,** ಚಿತ್ರದುರ್ಗ ಜಿಲ್ಲೆಯ ಮಠದ ಕುರಬಹಟ್ಟಿ ಗ್ರಾಮ ಪಂಚಾಯತಿಯ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿಕೊಂಡಿದ್ದ ಅವದಿಯಲ್ಲಿ, ಮಠದ ಕುರುಬಹಟ್ಟಿ ಗ್ರಾಮದಲ್ಲಿ ದಿನಾಂಕ 25/11/2010 ರಂದು ಸದರಿ ಗ್ರಾಮ ಪಂಚಾಯತಿಯ ತುರ್ತು ಸಭಾ ನಡಾವಳಿ ನಡೆದಿದ್ದು ಮತ್ತು ದಿನಾಂಕ 30/01/2012 ರಂದು 2ನೇಯ ನಡಾವಳಿ ನಡೆದಿದ್ದು ಶ್ರೀಮತಿ ಸಕೀಲಾ ಬಾನು ರವರ ಕರ ಆಕರಣೆಯ ವಿಷಯದ ಅರ್ಜಿಯನ್ನು ನೀವು ಓದಿ ತೋರಿಸಿದಾಗ ಆ ಸ್ಥಳವು ದೇವಸ್ಥಾನಕ್ಕೆ ಸೇರಿದ ಜಾಗ ಎಂಬುದಾಗಿ ತಿಳಿಸದೆ ಕೇವಲ ಖಾತೆ ಮಂಜೂರು ಪ್ರಕರಣವೆಂದು ನೀವು ತಿಳಿಸಿ ಆ ಮೂಲಕ ನೀವು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (i) ರಿಂದ (iii) ರಡಿಯಲ್ಲಿ ಕರ್ತವ್ಯಲೋಪವನ್ನೆಸಗಿರುತ್ತೀರಿ.

**ಮೂರನಯದಾಗಿ:- ಆಪಾದಿತ ಸರ್ಕಾರಿ ನೌಕರರಾದ ಸಮಿವುಲ್ಲಾ ಆದ ನೀವು,** ಚಿತ್ರದುರ್ಗ ಜಿಲ್ಲೆಯ ಮಠದ ಕುರಬಹಟ್ಟಿ ಗ್ರಾಮ ಪಂಚಾಯತಿಯ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿಕೊಂಡಿದ್ದ ಅವದಿಯಲ್ಲಿ, ಮಠದ ಕುರುಬಹಟ್ಟಿ ಗ್ರಾಮದ ವ್ಯಾಪ್ತಿಯಲ್ಲಿರುವ ದೇವಸ್ಥಾನದ ಆವರಣದ ಜಾಗವನ್ನು ಖಾತೆ ಸಂಖ್ಯೆ 144/580ಪಿ ರಲ್ಲಿ ಶ್ರೀಮತಿ ಶಕೀಲಾ ಕೋಂ ಖಲಂದರ್ ಸಾಬ್ ರವರ ಹೆಸರಿಗೆ ಅಕ್ರಮವಾಗಿ ಖಾತೆಯನ್ನು ಮಾಡಿ ಆ ಮೂಲಕ ನೀವು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ರ ನಿಯಮ 3(1)(i) ರಿಂದ (iii) ರಡಿಯಲ್ಲಿ ಕರ್ತವ್ಯಲೋಪವನ್ನೆಸಗಿರುತ್ತೀರಿ. "

4. The Inquiry Officer (Additional Registrar of Enquiries-16) on proper appreciation of oral and documentary evidence has held that, the above charge against the DGO Shri Samiulla, the then Secretary, Matada Kurubahatti Grama Panchayath, Chitradurga Taluk and District, is ' proved '.

5. On re-consideration of report of inquiry and all other materials on record, I do not find any reason to interfere with the findings recorded by the Inquiry Officer. Therefore, it is

hereby recommended to the Government to accept the report of Inquiry Officer.

6. As per the First Oral Statement of DGO furnished by the Enquiry Officer, DGO. Shri Samiulla, is due for retirement from service on 30.06.2023.

7. Having regard to the nature of charge '*proved*' against the DGO, and considering the totality of circumstances, it is hereby recommended to the Government to impose penalty of ' reducing the pay of DGO Shri Samiulla in the time scale of pay by three stages which will have the effect of postponing future increments for a period of two years.

8. Action taken in the matter shall be intimated to this Authority.

Connected records are enclosed herewith.

Sd/- 10/2/21

**(JUSTICE B.S.PATIL)**
**Upalokayukta,**
**State of Karnataka.**

*BS**

## ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ-155/2018/ಎ.ಆರ್.ಇ-16

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 09/02/2021.

## ವಿಚಾರಣಾ ವರದಿ

**ಉಪಸ್ಥಿತರು:** **ಸೆಲ್ವಕುಮಾರ್.ಸಿ,** ಅಪರ ನಿಬಂಧಕರು ವಿಚಾರಣೆಗಳು-16,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌ **ಶ್ರೀ ಸಮಿವುಲ್ಲಾ,** ಹಿಂದಿನ ಕಾರ್ಯದರ್ಶಿ, ಮಠದ ಕುರುಬಹಟ್ಟಿ ಗ್ರಾಮ ಪಂಚಾಯತಿ, ಚಿತ್ರದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ (ಪ್ರಸ್ತುತ ಗ್ರೇಡ್-2 ಕಾರ್ಯದರ್ಶಿ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ) ರವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಬಿಡಿ-7961/2015/ಡಿಆರ್ಇ-5 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 18/12/2017.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/07/ಗ್ರಾಪಂಕಾ/2018, ಬೆಂಗಳೂರು, ದಿನಾಂಕ: 18/01/2018
3. ಸರ್ಕಾರದ ತಿದ್ದೋಲೆ ಸಂಖ್ಯೆ: ಗ್ರಾಅಪ/07/ಗ್ರಾಪಂಕಾ/2018 ಬೆಂಗಳೂರು, ದಿನಾಂಕ 02/03/2018.
4. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ/155/2018, ಬೆಂಗಳೂರು ದಿನಾಂಕ: 02/03/2018.
5. Note No.Uplok-1 & 2/DE/Transfers/ 2019, dated 07/02/2019.

* * * *

1) ಉಪ ನಿರ್ದೇಶಕರು ಹಾಗೂ ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ರವರ ನಡಾವಳಿ ಸಂಖ್ಯೆ ಗ್ರಾಅಪ/07/ಗ್ರಾಪಂಕಾ/2018, ಬೆಂಗಳೂರು, ದಿನಾಂಕ: 18/01/2018 ಮತ್ತು ಸರ್ಕಾರದ ತಿದ್ದೋಲೆ ಸಂಖ್ಯೆ ಗ್ರಾಅಪ 07 ಗ್ರಾಪಂಕಾ 2018 ರ ಪ್ರಕಾರ ಇಲಾಖಾ ವಿಚಾರಣೆಯನ್ನು ನಡೆಸುವಂತೆ ಲೋಕಾಯುಕ್ತ ಸಂಸ್ಥೆಗೆ

ವಹಿಸಿದ್ದು, ಅದರನುಸಾರ ಗೌರವಾನ್ವಿತ ಉಪಲೋಕಾಯುಕ್ತರು-2 ರವರ ನಾಮ ನಿರ್ದೇಶನ ಆದೇಶ ಸಂಖ್ಯೆ ಉಪಲೋಕ್-2/ಡಿಇ/155/2018 ಬೆಂಗಳೂರು ದಿನಾಂಕ 22/03/2018 ರಂತೆ **ಶ್ರೀ ಸಮಿವುಲ್ಲಾ,** ಹಿಂದಿನ ಕಾರ್ಯದರ್ಶಿ, ಮತದ ಕುರುಬಹಟ್ಟಿ ಗ್ರಾಮ ಪಂಚಾಯತಿ, ಚಿತ್ರದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ (ಪ್ರಸ್ತುತ ಗ್ರೇಡ್-2 ಕಾರ್ಯದರ್ಶಿ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ( ಇನ್ನು ಮುಂದೆ **"ಆಪಾದಿತ ಸರ್ಕಾರಿ ನೌಕರ"** ಎಂದು ಸಮಭೋದಿಸಲ್ಪಡುವ ) ರವರ ವಿರುದ್ಧದ ದೋಷಾರೋಪಣೆ ತಯಾರು ಮಾಡಿ ಇಲಾಖಾ ವಿಚಾರಣೆ ಮಾಡಿ ವರದಿ ಸಲ್ಲಿಸಲು ಅಪರ ನಿಬಂಧಕರು, ವಿಚಾರಣೆಗಳು-11, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಿದ್ದು, ಅದರಂತೆ ಅಪರ ನಿಬಂಧಕರು, ವಿಚಾರಣೆಗಳು-11 ರವರು ದೋಷಾರೋಪಣೆಯನ್ನು ಸಿದ್ದಪಡಿಸಿರುತ್ತಾರೆ, ನಂತರ ಉಲ್ಲೇಖ-5 ರಂತೆ ಅಪರ ನಿಬಂಧಕರು, ವಿಚಾರಣೆಗಳು-11 ರವರಿಂದ ಈ ವಿಚಾರಣಾ ಪ್ರಾಧಿಕಾರವಾದ ಅಪರ ನಿಬಂಧಕರು, ವಿಚಾರಣೆಗಳು-16 ರವರಿಗೆ ವರ್ಗಾವಣೆಗೊಂಡಿರುತ್ತದೆ.

2) ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ.ರವರ ವಿರುದ್ಧ ದೋಷಾರೋಪಣೆ (Articles of Charge) ಅನ್ನು ಅಪರ ನಿಬಂಧಕರು, ವಿಚಾರಣೆಗಳು-11 ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ. ರವರಿಗೆ ದಿನಾಂಕ: 04/05/2018 ರಂದು ಕಳುಹಿಸಲಾಗಿರುತ್ತದೆ.

## ಅನುಬಂಧ-1
## ದೋಷಾರೋಪಣೆ

**ಮೊದಲನೆಯದಾಗಿ:- ಆಪಾದಿತ ಸರ್ಕಾರಿ ನೌಕರರಾದ ಸಮಿವುಲ್ಲಾ ಆದ ನೀವು,** ಚಿತ್ರದುರ್ಗ ಜಿಲ್ಲೆಯ ಮತದ ಕುರಬಹಟ್ಟಿ ಗ್ರಾಮ ಪಂಚಾಯತಿಯ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿಕೊಂಡಿದ್ದ ಅವದಿಯಲ್ಲಿ ಮತದ ಕುರುಬಹಟ್ಟಿ ಗ್ರಾಮದಲ್ಲಿ ಶ್ರೀಮತಿ ಪ್ರೇಮಕ್ಕ ಕೋಂ ರಾಮಣ್ಣ ಜಂಟಿ ಎಸ್.ಆರ್.

ಕರಿಯಪ್ಪ ಬಿನ್ ರುದ್ರಪ್ಪ ರವರು ಅವರ ಮನೆಯ ಹಿಂಭಾಗದಲ್ಲಿ ಸರ್ಕಾರಿ ಶಾಲೆಯ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದನ್ನು ಮತ್ತು ಡಬ್ಬ ಅಂಗಡಿಯ ಮುರುಗೇಶಪ್ಪ ರವರು ಸರ್ಕಾರಿ ಶಾಲೆಯ ಅವರಣ ಗೋಡೆಯನ್ನು ಒತ್ತುವರಿ ಮಾಡಿಕೊಂಡು ಅಂಗಡಿಯನ್ನು ಇಟ್ಟಿರುವುದನ್ನು ತೆರವುಗೊಳಿಸಲು ನೀವು ಯಾವುದೇ ಕ್ರಮವನ್ನು ಕೈಗೊಳ್ಳಲು ವಿಫಲರಾಗಿ ಆ ಮೂಲಕ ನೀವು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ (i) ರಿಂದ (iii) ರಡಿಯಲ್ಲಿ ಕರ್ತವ್ಯಲೋಪವನ್ನೆಸಗಿರುತ್ತೀರಿ.

**ಎರಡನೆಯದಾಗಿ:- ಆಪಾದಿತ ಸರ್ಕಾರಿ ನೌಕರರಾದ ಸಮಿವುಲ್ಲಾ ಆದ ನೀವು,** ಚಿತ್ರದುರ್ಗ ಜಿಲ್ಲೆಯ ಮಠದ ಕುರಬಹಟ್ಟಿ ಗ್ರಾಮ ಪಂಚಾಯತಿಯ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿಕೊಂಡಿದ್ದ ಅವದಿಯಲ್ಲಿ, ಮಠದ ಕುರುಬಹಟ್ಟಿ ಗ್ರಾಮದಲ್ಲಿ ದಿನಾಂಕ 25/11/2010 ರಂದು ಸದರಿ ಗ್ರಾಮ ಪಂಚಾಯತಿಯ ತುರ್ತು ಸಭಾ ನಡಾವಳಿ ನಡೆದಿದ್ದು ಮತ್ತು ದಿನಾಂಕ 30/01/2012 ರಂದು 2ನೇಯ ನಡಾವಳಿ ನಡೆದಿದ್ದು ಶ್ರೀಮತಿ ಸಕೀಲಾ ಬಾನು ರವರ ಕರ ಆಕರಣೆಯ ವಿಷಯದ ಅರ್ಜಿಯನ್ನು ನೀವು ಓದಿ ತೋರಿಸಿದಾಗ ಆ ಸ್ಥಳವು ದೇವಸ್ಥಾನಕ್ಕೆ ಸೇರಿದ ಜಾಗ ಎಂಬುದಾಗಿ ತಿಳಿಸದೆ ಕೇವಲ ಖಾತೆ ಮಂಜೂರು ಪ್ರಕರಣವೆಂದು ನೀವು ತಿಳಿಸಿ ಆ ಮೂಲಕ ನೀವು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (i) ರಿಂದ (iii) ರಡಿಯಲ್ಲಿ ಕರ್ತವ್ಯಲೋಪವನ್ನೆಸಗಿರುತ್ತೀರಿ.

**ಮೂರನಯದಾಗಿ:- ಆಪಾದಿತ ಸರ್ಕಾರಿ ನೌಕರರಾದ ಸಮಿವುಲ್ಲಾ ಆದ ನೀವು,** ಚಿತ್ರದುರ್ಗ ಜಿಲ್ಲೆಯ ಮಠದ ಕುರಬಹಟ್ಟಿ ಗ್ರಾಮ ಪಂಚಾಯತಿಯ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿಕೊಂಡಿದ್ದ ಅವದಿಯಲ್ಲಿ, ಮಠದ

ಕುರುಬಹಟ್ಟಿ ಗ್ರಾಮದ ವ್ಯಾಪ್ತಿಯಲ್ಲಿರುವ ದೇವಸ್ಥಾನದ ಆವರಣದ ಜಾಗವನ್ನು ಖಾತೆ ಸಂಖ್ಯೆ 144/580ಪಿ ರಲ್ಲಿ ಶ್ರೀಮತಿ ಶಕೀಲಾ ಕೋಂ ಖಲಂದರ್ ಸಾಬ್ ರವರ ಹೆಸರಿಗೆ ಅಕ್ರಮವಾಗಿ ಖಾತೆಯನ್ನು ಮಾಡಿ ಆ ಮೂಲಕ ನೀವು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಮದ ವರ್ತಿಸಿ, ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ರ ನಿಯಮ 3(1)(i) ರಿಂದ (iii) ರಡಿಯಲ್ಲಿ ಕರ್ತವ್ಯಲೋಪವನ್ನೆಸಗಿರುತ್ತೀರಿ.

## ಅನುಬಂಧ-2
## ದೋಷಾರೋಪಣೆಯ ವಿವರ

ದೂರುದಾರರಾದ ಶ್ರೀ **ಎಂ. ಮಹೇಶ್ವರಪ್ಪ** ಬಿನ್ ಮಹಾಲಿಂಬಪ್ಪ, ಮಠದ ಕುರುಬಹಟ್ಟಿ, ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ ( ಇನ್ನು ಮುಂದೆ ದೂರುದಾರರ ಎಂದು ಸಂಬೋದಿಸಲ್ಪಡುವ ) ರವರು ತಮ್ಮ ದೂರಿನಲ್ಲಿ ಮಠದ ಕುರುಬಹಟ್ಟಿ ಗ್ರಾಮದ ಎ.ಆರ್. ನಗರದಲ್ಲಿ ಕಾಯ್ದಿರಿಸಲಾದ ಪಾರ್ಕ್, ಶಾಲಾ ಮೈದಾನದ ರಸ್ತೆ, ರಾಜಕಾಲುವೆಗಳ ಖಾಲಿ ಜಾಗದಲ್ಲಿ ಆಶ್ರಮ ಕಟ್ಟಡ ಕಟ್ಟಲು ಅವಕಾಶ ಮಾಡಿಕೊಟ್ಟಿದ್ದು ಭ್ರಷ್ಟಾಚಾರವನ್ನೆಸಗಿರುತ್ತಾರೆ ಮತ್ತು ನಿವೇಶನಗಳಿಗೆ ಸಂಬಂಧಿಸಿದಂತೆ, ಡಿಮ್ಯಾಂಡ್ ರಿಜಿಸ್ಟರ್‌ನಲ್ಲಿ ಖಾತೆದಾರರ ಹೆಸರುಗಳನ್ನು ನಮೂದಿಸದೇ ಖಾಲಿ ಬಿಟ್ಟು ಅಕ್ರಮ ಬಳಕೆಗೆ ಉಪಯೋಗಿಸಿಕೊಳ್ಳಲು ಸಾಧ್ಯತೆಯಿದ್ದು ಈ ಬಗ್ಗೆ ಸೂಕ್ತ ತನಿಖೆ ನಡೆಸಲು ಕೋರಿರುತ್ತಾರೆ.

ದೂರುದಾರರು ಮಾಡಿರುವ ಆಪಾದನೆಗಳಿಗೆ ಸಂಬಂಧಿಸಿದಂತೆ, ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗ ರವರಿಗೆ ತನಿಖೆಯನ್ನು ನಡೆಸಲು ಸೂಚಿಸಿದ್ದು, ಸದರಿಯವರು ತನಿಖೆಯನ್ನು ನಡೆಸಿ ವರದಿಯನ್ನು ಸಲ್ಲಿಸಿದ್ದು, ತನಿಖಾಧಿಕಾರಿಗಳು ಸಲ್ಲಿಸಿರುವ ವರದಿ ಹಾಗೂ ಸಂಬಂಧಪಟ್ಟ ದಾಖಲಾತಿಗಳನ್ನು ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ಕಂಡುಬರುತ್ತವೆ.

(i) ದೇವಸ್ಥಾನಕ್ಕೆ ಸೇರಿದ ಜಾಗವನ್ನು ಶ್ರೀಮತಿ ಶಕೀಲಾ ಇವರಿಗೆ ಖಾತೆ ಸಂಖ್ಯೆ 144/580ಪಿ ರಲ್ಲಿ ಕಾನೂನುಬಹಿರವಾಗಿ ಮಾಡಿಕೊಟ್ಟಿದ್ದು, ಸದರಿ ಖಾತೆದಾರರಿಗೆ ಮನೆ ಕಟ್ಟಿಕೊಳ್ಳಲು ಸಹ ಅನುಮತಿಯನ್ನು ನೀಡಿರುತ್ತೀರಿ.

(ii) ಶ್ರೀಮತಿ ಪ್ರೇಮಕ್ಕ ಕೋಂ ರಾಮಪ್ಪ ರವರು ಸದರಿಯವರ ಮನೆಯ ಹಿಂಭಾಗದಲ್ಲಿ ಅಂದರೆ ಪಶ್ಚಿಮ ಭಾಗಕ್ಕೆ ಇರುವ ಶಾಲಾ ಅವರಣವನ್ನು ಒತ್ತುವರಿ ಮಾಡಿಕೊಂಡಿದ್ದು ಯಾವುದೇ ಕ್ರಮಕೈಗೊಂಡಿರುವುದಿಲ್ಲ.

(iii) ಡಬ್ಬ ಅಂಗಡಿಯ ಮುರುಗೇಶಪ್ಪ ರವರು ಸರ್ಕಾರಿ ಶಾಲೆಯ ಜಾಗವನ್ನು ಒತ್ತುವರಿ ಮಾಡಿ ಶಾಲಾ ಕಾಂಪೌಂಡನ್ನು ಒತ್ತುವರಿ ಮಾಡಿಕೊಂಡು ಅಂಗಡಿಯನ್ನಿಟ್ಟಿದ್ದು, ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ.

(iv) ಖಾತೆ ಬದಲಾವಣೆಗೆ ಸಂಬಂಧಪಟ್ಟ ಸಭ ನಡಾವಳಿ, ಹಕ್ಕು ಪತ್ರ, ರಸೀತಿ ಹಾಗೂ ಪರವಾನಗಿಗಳನ್ನು ಕಛೇರಿಯಲ್ಲಿ ನಿರ್ವಹಿಸಿರುವುದಿಲ್ಲ.

ತನಿಖಾಧಿಕಾರಿಯವರು ಸಲ್ಲಿಸಿರುವ ತನಿಖಾ ವರದಿ ಹಾಗೂ ಆಪಾದಿತರು ಸಲ್ಲಿಸಿರುವ ವಿವರಣೆ ಮತ್ತು ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿದಾಗ, ಆಪಾದಿತ ಸರ್ಕಾರಿ ನೌಕರರಾದ ನೀವು ಕಾನೂನುಬಾಹಿರವಾಗಿ ಕ್ರಮಗಳನ್ನು ಕೈಗೊಂಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಮದ ಸದರಿ ದೂರಿಗೆ ಸಂಬಂಧಿಸಿದಂತೆ ನಿಮಗೆ ಪರಿಶೀಲನಾ ಟಿಪ್ಪಣಿಯನ್ನು ಕಳುಹಿಸಿ, ಉತ್ತರವನ್ನು ಸಲ್ಲಿಸುವಂತೆ ಸೂಚಿಸಿದ್ದು, ಅದರ್ಲಂತೆ ನೀವು ಉತ್ತರವನ್ನು ಸಲ್ಲಿಸಿದ್ದು, ಸದರಿ ಉತ್ತರವನ್ನು ಒಪ್ಪಲು ಬಾರದ ಕಾರಣ, ಆಪಾದಿತ ಸರ್ಕಾರಿ ನೌಕರರಾದ ನೀವು ನಿಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಮಾಡಿಲ್ಲದಿರುವುದು ಕಂಡುಬಂದಿದ್ದರಿಂದ ಮತ್ತು ಈ ಕೃತ್ಯ ದುರ್ನಡತೆ ಎಂಬ ಪರಿಭಾಷೆಯಲ್ಲಿ ಬರುವುದರಿಂದ ಕರ್ನಾಟಕ ಸಿವಿಲ್ ಸೇವಾ (ನಡತೆ) 1966 ರಡಿ ನಿಯಮ 3(1) (i) ರಿಂದ (iii) ರಡಿಯಲ್ಲಿ ಕರ್ತವ್ಯಲೋಪವೆಸಗಿರುವುದು ಕಂಡುಬಂದಿದ್ದರಿಂದ ಕರ್ನಾಟಕ ನಾಗರಿಕ ಸೇವಾ ನಿಯಮಗಳು 1957 ರಡಿ ಶಿಸ್ತಿನ ಕ್ರಮಕೈಗೊಳ್ಳಬೇಕೆಂದು ಗೌರವಾನ್ವಿತ ಉಪಲೋಕಾಯುಕ್ತರವರು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ ಮೇರೆಗೆ ಸರ್ಕಾರವು ಉಲ್ಲೇಖ-2 ರ ಆದೇಶದಲ್ಲಿ ಇಲಾಖಾ ವಿಚಾರಣೆ ನಡೆಸಲು ಅನುಮತಿ ನೀಡಿರುತ್ತದೆ. ಅದರಂತೆ, ಉಲ್ಲೇಖ-4 ರಂತೆ ಗೌರವಾನ್ವಿತ ಉಪಲೋಕಾಯುಕ್ತ-2 ರವರು, ಅಪರ ನಿಬಂಧಕರು, ವಿಚಾರಣೆಗಳು-11 ರವರಿಗೆ ವಿಚಾರಣೆ ನಡೆಸಿ ವರದಿ ಸಲ್ಲಿಸಲು ಸೂಚಿಸಿರುತ್ತಾರೆ. ಉಲ್ಲೇಖ-5 ರಂತೆ ಅಪರ ನಿಬಂಧಕರು, ವಿಚಾರಣೆಗಳು-11 ರವರಿಂದ ಅಪರ ನಿಬಂಧಕರು, ವಿಚಾರಣೆಗಳು-16 ರವರಿಗೆ ವರ್ಗಾವಣೆಗೊಂಡಿರುತ್ತದೆ. ಆದ್ದರಿಂದ ನಿಮ್ಮ ಮೇಲೆ ಈ **ದೋಷಾರೋಪಣೆ.**

3) ಈ ಮೇಲ್ಕಂಡ ದೋಷಾರೋಪಣೆ (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌ.ರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ. ರವರು ದಿನಾಂಕ 04/06/2018 ರಂದು ವಿಚಾರಣಾಧಿಕಾರಿಯವರ ಮುಂದೆ ಹಾಜರಾಗಿದ್ದು, ಸದರಿಯವರ ಪ್ರಥಮ ಮೌಖಿಕ ಹೇಳಿಕೆ, ನಿಯಮ–11 ಕೆ.ಸಿ.ಎಸ್. ಸಿಸಿಎ ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌ. ರವರು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

4) ಆ.ಸ.ನೌ. ರವರಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

5) ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ. ರವರು ತಮ್ಮ ಪರವಾಗಿ ದಿನಾಂಕ 22/09/2018, 28/11/2018, 29/12/2018 ಮತ್ತು 25/03/2019 ರಂದು ರಕ್ಷಣಾ ಹೇಳಿಕೆ ಸಲ್ಲಿಸಲು ಕಾಲವಕಾಶ ಕೋರಿದಂತೆ ನೀಡಿದಾಗ್ಯೂ ಸಲ್ಲಿಸಲಿಲ್ಲವಾದ್ದರಿಂದ ದಿನಾಂಕ 24/04/2019 ರಂದು ದಾಖಲಿಸಿಲ್ಲ ಎಂದು ಪರಿಗಣಿಸಲಾಗಿರುತ್ತದೆ.

6) ಈ ವಿಚಾರಣೆಯಲ್ಲಿ, ಆ.ಸ.ನೌ. ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ತಮ್ಮ ಪರವಾಗಿ ಶ್ರೀ ಎಂ. ಮಹೇಶ್ವರಪ್ಪ ರವರನ್ನು ಪಿ.ಡಬ್ಲ್ಯೂ–1 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ.1 ರಿಂದ 5 ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯಾದ ಶ್ರೀ ಎನ್.ಎನ್. ಕೇಶವಮೂರ್ತಿ, ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗ ರವರನ್ನು ಪಿ.ಡಬ್ಲ್ಯೂ–2 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ. 6 ರಿಂದ 11 ರವರೆಗಿನ ದಾಖಲಾತಿಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತದನಂತರ, ಶ್ರೀ

ವಿರೂಪಾಕ್ಷ ಓಡೆಯರ್, ನಿವೃತ್ತ ಪ್ರಭಾರ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಎಂ.ಕೆ. ಹಟ್ಟಿ ಗ್ರಾಮಪಂಚಾಯತಿ, ಚಿತ್ರದುರ್ಗ ತಾಲ್ಲೂಕು ರವರನ್ನು ಹೆಚ್ಚುವರಿ ಸಾಕ್ಷಿಯಾಗಿ ಶಿಸ್ತು ಪ್ರಾಧಿಕಾರದ ಪರವಾಗಿ ಪಿಡಬ್ಲ್ಯೂ–3 ಎಂದು ಸಾಕ್ಷ್ಯ ನುಡಿಸಿಕೊಂಡಿದ್ದು, ನಿ.ಪಿ–12 ರಿಂದ 21 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ಆ.ಸ.ನೌ. ರವರ ದ್ವಿತೀಯ ಮೌಖಿಕ ಹೇಳಿಕೆಯನ್ನು ತಗೆದುಕೊಳ್ಳಲಾಗಿರುತ್ತದೆ. ದಿನಾಂಕ 28/12/2020 ರಂದು ಆಪಾದಿತ ಸರ್ಕಾರಿ ನೌಕರರಾಗಲೀ ಅಥವಾ ಅವರ ವಕೀಲರಾಗಲೀ ಗೈರುಹಾಜರಾಗಿದ್ದರಿಂದ, ಆಪಾದಿತ ಸರ್ಕಾರಿ ನೌಕರರನ್ನು **ಏಕತರ್ಫಿ ಎಂದು ಪರಿಗಣಿಸಲಾಯಿತು.**

7) ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ ರವರ ಮೇಲೆ ಆಪಾದಿಸಲಾದ ಎಲ್ಲಾ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2**: ಆದೇಶವೇನು?

8) ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

9) ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ.

**ಅಂಶ 1: ಸಕಾರಾತ್ಮಕವಾಗಿದೆ.**

**ಅಂಶ 2: ಅಂತಿಮ ಆದೇಶದಂತೆ**

**ಕಾರಣಗಳು:**

10) **ಅಂಶ–1)** ಈ ಪ್ರಕರಣದಲ್ಲಿ ಆ.ಸ.ನೌ. ರವರ ವಿರುದ್ಧ ಆರೋಪಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು (1) ಶ್ರೀ ಎಂ. ಮಹೇಶ್ವರಪ್ಪ (ದೂರುದಾರರು) (2) ಶ್ರೀ ಎನ್.ಎನ್. ಕೇಶವಮೂರ್ತಿ, ಪೊಲೀಸ್ ನಿರೀಕ್ಷಕರು ಮತ್ತು (3) ಶ್ರೀ ವಿರೂಪಾಕ್ಷ ಓಡೆಯರ್, ನಿವೃತ್ತ ಪ್ರಭಾರ ಪಂಚಾಯತಿ ಅಭಿವೃದ್ಧಿ ಅಧಿಕಾರಿ ರವರುಗಳನ್ನು ಕ್ರಮವಾಗಿ ಪಿಡಬ್ಲ್ಯೂ–1 ರಿಂದ 3 ಎಂದು ಸಾಕ್ಷ್ಯ ನುಡಿಸಿಕೊಂಡು ನಿ.ಪಿ.1 ರಿಂದ 21 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ದೂರುದಾರರು ಸಲ್ಲಿಸಿದ್ದ ದೂರು ದಿನಾಂಕ 28/02/2015 ನ್ನು **ನಿ.ಪಿ–1** ಎಂದು, ಪ್ರಪತ್ರ 1 ಮತ್ತು 2ನ್ನು **ನಿ.ಪಿ–2** ಮತ್ತು **ನಿ.ಪಿ–3** ಎಂದು, ದೂರಿನೊಂದಿಗೆ ಸಲ್ಲಿಸಲಾದ ದಾಖಲಾತಿಗಳನ್ನು **ನಿ.ಪಿ–4** ( 4 ಪುಟಗಳು ) ಎಂದು, ದೂರುದಾರರು ಸಲ್ಲಿಸಿದ ದಿನಾಂಕ 28/03/2016 ರ ಆಕ್ಷೇಪಣೆಯನ್ನು **ನಿ.ಪಿ–5** ಎಂದು, ಆ.ಸ.ನೌ ರವರು ತನಿಖಾಧಿಕಾರಿಯವರಿಗೆ ನೀಡಿದ ಮಾಹಿತಿ ಹಳ್ಳ, ರಸ್ತೆ, ರಾಜಕಾಲುವೆ, ಪಾರ್ಕ್ ಮತ್ತು ಶಾಲೆ ಮೈದಾನವನ್ನು ಗುರುತು ಮಾಡಲು ನಕಾಶೆ ಇರುವುದಿಲ್ಲವೆಂದು ತಿಳಸಿದ್ದರು, ಯಾರು ಮತ್ತು ಎಷ್ಟು ಜಾಗವನ್ನು ಅತಿಕ್ರಮಿಸಿಕೊಂಡಿರುತ್ತಾರೆಂದು ಗುರುತಿಸಲು ಕಷ್ಟವಾಗುತ್ತದೆಂದು ನೀಡಿದ ಪತ್ರವನ್ನು **ನಿ.ಪಿ–6** ಎಂದು, ಆ.ಸ.ನೌ ರವರು ತನಿಖಾಧಿಕಾರಿಗೆ ದಿನಾಂಕ 12/07/2017 ರಂದು ಬರೆದ ಪತ್ರವಾಗಿದ್ದು, ರಿ.ಸ.ನಂ. 61 ಎಂ.ಆರ್. ನಗರದ ನಿವೇಶನದ ಹಂಚಿಕೆಯಾಗಿರುವ ಬಗ್ಗೆ ಯಾವುದೇ ನಕಾಶೆಯಾಗಲಿ ಅಥವಾ ದಾಖಲೆಗಳಾಗಲೀ ಲಭ್ಯವಿರುವುದಿಲ್ಲವೆಂದು ನೀಡಿದ ವರದಿಯನ್ನು **ನಿ.ಪಿ–7** ಎಂದು, ದಿನಾಂಕ 08/08/2017 ರಂದು ಆ.ಸ.ನೌ ರವರು ತನಿಖಾಧಿಕಾರಿಯವರಿಗೆ ಬರೆದ ಪತ್ರವನ್ನು **ನಿ.ಪಿ–8** ಎಂದು ಗುರುತಿಸಿಕೊಂಡಿರುತ್ತಾರೆ. ದಿನಾಂಕ 04/09/2017 ರಂದು ಆ.ಸ.ನೌ ರವರ ಹೇಳಿಕೆಯನ್ನು ತನಿಖಾಧಿಕಾರಿಯವರು ಪಡೆದುಕೊಂಡಿದ್ದು ಅದನ್ನು **ನಿ.ಪಿ–9** ಎಂದು, ಸರ್ವೆ ಕಾಲಕ್ಕೆ ತೆಗೆದ ಭಾವಚಿತ್ರದ ಜೆರಾಕ್ಸ ಹಾಳೆಗಳನ್ನು **ನಿ.ಪಿ–10** (2 ಹಾಳೆಗಳು) ಎಂದು,

ತನಿಖಾಧಿಕಾರಿ ಸಲ್ಲಿಸಿದ ವರದಿ ದಿನಾಂಕ 09/10/2017 ನ್ನು **ನಿ.ಪಿ–11** ಎಂದು ಗುರುತಿಸಲಾಗಿರುತ್ತದೆ.

11) ಪಿಡಬ್ಲ್ಯೂ–3 ಶ್ರೀ ವಿರೂಪಾಕ್ಷ ಒಡೆಯರ್, ನಿವೃತ್ತ ಪ್ರಭಾರ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಎಂ.ಕೆ. ಹಟ್ಟಿ ಗ್ರಾಮಪಂಚಾಯತಿ ರವರು ದಿನಾಂಕ 08/08/2017 ರಂದು ತನಿಖಾಧಿಕಾರಿಯವರಿಗೆ ರಿ.ಸ.ನಂ. 61 ರಲ್ಲಿ ಹೊಸದಾಗಿ ಎಂ.ಆರ್. ನಗರವೆಂದು ಬಡಾವಣೆ ನಿರ್ಮಾಣವಾಗಿದ್ದು, ಸದರಿ ಸರ್ವೆನಂಬರ್‌ನಲ್ಲಿ ಒತ್ತುವರಿ ಪ್ರದೇಶವನ್ನು ಗುರುತಿಸಲು ಸ್ಥಳ ತನಿಖೆ ಮಾಡಿರುವ ಬಗ್ಗೆ ಬರೆದ ಪತ್ರವನ್ನು **ನಿ.ಪಿ–12** ಎಂದು, ಈ ಸಾಕ್ಷಿಯು ಕಳುಹಿಸಿದ ನೋಟಿಸಿನ ದೃಢಿಕೃತ ಪ್ರತಿಯನ್ನು **ನಿ.ಪಿ–13** ಎಂದು, ಶ್ರೀಮತಿ ಶಕೀಲಾ ರವರಿಗೆ ಆ.ಸ.ನೌ ರವರು ಖಾತೆ ಮಾಡಿದ ಬಗ್ಗೆ ನೀಡಿದ ಸಾಮಾನ್ಯ ರಸೀತಿಯ ದೃಢಿಕೃತ ಪ್ರತಿಯನ್ನು **ನಿ.ಪಿ–14** ಎಂದು ಗುರುತಿಸಿರುತ್ತಾರೆ. **ಮುಂದುವರೆದು, ಸದರಿ** ಶ್ರೀಮತಿ ಶಕೀಲಾ ರವರಿಗೆ ಮನೆ ಕಟ್ಟಲು ತೆರಿಗೆ ಪಡೆದ ಬಗ್ಗೆ ನೀಡಿದ ಸಾಮಾನ್ಯ ರಸೀತಿಯ ದೃಢಿಕೃತ ಪ್ರತಿಯನ್ನು **ನಿ.ಪಿ–15** *ಎಂದು,* ಶ್ರೀಮತಿ ಶಕೀಲಾ ರವರಿಗೆ ಮನೆ ಕಟ್ಟಲು ನೀಡಿದ ಪರವಾನಿಗೆ ಪತ್ರದ ದೃಢಿಕೃತ ಪ್ರತಿಯನ್ನು **ನಿ.ಪಿ–16** ಎಂದು, ಶ್ರೀಮತಿ ಶಕೀಲಾ ರವರಿಂದ ಪಡೆದ ಮನೆ ತೆರಿಗೆ ಸಾಮಾನ್ಯ ರಸೀತಿಯ ದೃಢಿಕೃತ ಪ್ರತಿಯನ್ನು **ನಿ.ಪಿ–17** ಎಂದು ಗುರುತಿಸಿರುತ್ತಾರೆ.

12) ಮುಂದುವರೆದು, ಮಂಡನಾಧಿಕಾರಿಗಳು ಈ ಸಾಕ್ಷಿದಾರರ ಮೂಲಕ ಶ್ರೀ ಮುರುಗೇಶ್ ಬಿನ್ ಬೋರಯ್ಯ ರವರಿಗೆ ನೀಡಿದ ನೋಟಿಸಿನ ದೃಢಿಕೃತ ಪ್ರತಿಯನ್ನು **ನಿ.ಪಿ–18 ಎಂದು,** ಶ್ರೀಮತಿ ಪ್ರೇಮಕ್ಕ ಬಿನ್ ರಾಮಪ್ಪ ಜಂಟಿ ಎಸ್.ಆರ್. ಕರಿಯಪ್ಪ ಬಿನ್ ರುದ್ರಪ್ಪ ರವರಿಗೆ ನೀಡಿದ ನೋಟಿಸಿನ ದೃಢಿಕೃತ ಪ್ರತಿಯನ್ನು **ನಿ.ಪಿ–19** ಎಂದು ಗುರುತಿಸಿರುತ್ತಾರೆ. 2 ಪಂಚಾಯತ್ ನಡಾವಳಿಗಳನ್ನು ನಿ.ಪಿ–20 ಮತ್ತು 21 ಎಂದು ಗುರುತಿಸಿರುತ್ತಾರೆ.

13) ದೂರುದಾರರಾದ ಶ್ರೀ ಎಂ. **ಮಹೇಶ್ವರಪ್ಪ/ಪಿಡಬ್ಲ್ಯೂ–1** ರವರು ತಮ್ಮ ಮೌಖಿಕ ಸಾಕ್ಷ್ಯದ ಮುಖ್ಯ ವಿಚಾರಣೆಯಲ್ಲಿ, ತಾನು ಆಪಾದಿತ ಸರ್ಕಾರಿ ನೌಕರರ ವಿರುದ್ಧ ಲೋಕಾಯುಕ್ತ ಸಂಸ್ಥೆಗೆ ದೂರನ್ನು ನೀಡಿರುವುದಾಗಿ ಹಾಗೂ ಈ ಬಗ್ಗೆ ಈ ಕೆಳಕಂಡಂತೆ ನುಡಿದಿರುತ್ತಾರೆ:–

**" ಮಠದ ಕುರುಬರಟ್ಟಿ ಗ್ರಾಮದ ಎಂ.ಆರ್. ನಗರದಲ್ಲಿ ಕಾಯ್ದಿರಿಸಲಾದ ಪಾರ್ಕ್, ಶಾಲಾ ಮೈದಾನ, ರಸ್ತೆ, ರಾಜಕಾಲುವೆ, ದೇವಸ್ಥಾನ ಈ ಖಾಲಿ ಜಾಗಗಳಲ್ಲಿ ಅಕ್ರಮ ಕಟ್ಟಡ ಕಟ್ಟಲು ಆಪಾದಿತ ಸರ್ಕಾರಿ ನೌಕರವರು ಅವಕಾಶ ನೀಡಿ ಭ್ರಷ್ಟಾಚಾರ ಎಸಗಿರುತ್ತಾರೆ. ಸದರಿ ನಿವೇಶನಗಳಿಗೆ ಸಂಬಂಧಪಟ್ಟಂತೆ, ಡಿಮ್ಯಾಂಡ್ ರಿಜಿಸ್ಟರ್‌ನಲ್ಲಿ ಖಾತೆದಾರರ ಹೆಸರು ನಮೂದಿಸದೆ, ಖಾಲಿ ಬಿಟ್ಟು ಅಕ್ರಮ ಬಳಕೆಗೆ ಉಪಯೋಗಿಸಿಕೊಳ್ಳುವಂತೆ ಆಪಾದಿತ ಸರ್ಕಾರಿ ನೌಕರವರು ಮಾಡಿರುತ್ತಾರೆ ".**

ಈ ರೀತಿ ನುಡಿದಿದ್ದು, ತಾನು ಸಲ್ಲಿಸಿದ ನಿ.ಪಿ–1 ಮತ್ತು 2 ದೂರಿನಲ್ಲಿ ಹೇಳಿದ ಸಂಗತಿಗೆ ಪೂರಕವಾಗುವಂತೆ ಸಾಕ್ಷ್ಯ ನುಡಿದಿರುತ್ತಾರೆ. ಅಲ್ಲದೆ, ತಮ್ಮ ಪಾಟೀ ಸವಾಲಿನಲ್ಲಿ ಈ ಲೋಕಾಯುಕ್ತ ಸಂಸ್ಥೆಗೆ ದೂರು ಸಲ್ಲಿಸುವ ಪೂರ್ವದಲ್ಲಿ ಕುರಬರ ಹಟ್ಟಿ ಗ್ರಾಮಪಂಚಾಯತಿಗೆ, ತಾಲ್ಲೂಕು ಪಂಚಾಯತಿಗೆ ದೂರು ಸಲ್ಲಿಸಿದ್ದಾಗಿ ಆದರೆ, ಅವರು ಯಾವುದೇ ಕ್ರಮ ಜರಗಿಸಿರುವುದಿಲ್ಲವೆಂದು ನುಡಿದಿರುತ್ತಾರೆ. ಅಲ್ಲದೆ, ಶ್ರೀಮತಿ ಶಕೀಲಾ ರವರು ಕಟ್ಟಿರುವ ಮನೆಯ ಸಂಪೂರ್ಣ ಜಾಗ ದೇವಸ್ಥಾನದ ಜಾಗವಿರುತ್ತದೆಂದು ನುಡಿದಿರುತ್ತಾರೆ. ಅಲ್ಲದೆ, ಶ್ರೀಮತಿ ಶಕೀಲಾ ರವರ ಹೆಸರಿಗೆ 2012ನೇ ಸಾಲಿನಲ್ಲಿ ಖಾತಾ ಮಾಡಲಾಗಿರುತ್ತದೆಂದು ಕಾರಣ, ಈ ಬಗ್ಗೆ ತಾನು ಲೋಕಾಯುಕ್ತ ಸಂಸ್ಥೆಗೆ ದೂರು ಸಲ್ಲಿಸಿರುವ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ.

14) ಶಿಸ್ತು ಪ್ರಾಧಿಕಾರವು ಆ.ಸ.ನೌ ರವರ ಮೇಲಿನ ಆರೋಪವನ್ನು ರುಜುವಾತುಪಡಿಸಲು **ಪಿ.ಡಬ್ಲ್ಯೂ–2 ತನಿಖಾಧಿಕಾರಿ ಶ್ರೀ ಎನ್.ಎನ್. ಕೇಶವಮೂರ್ತಿ,** ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗ ರವರ ಸಾಕ್ಷ್ಯವನ್ನು ನುಡಿಸಿಕೊಂಡಿದ್ದು, ಇವರು ನಿರ್ವಹಿಸಿದ ಕರ್ತವ್ಯದ ಬಗ್ಗೆ ಈ ಕೆಳಕಂಡಂತೆ ನುಡಿದಿರುತ್ತಾರೆ:–

" ದಿನಾಂಕ 09/06/2017 ರಂದು ಆಪಾದಿತ ಸರ್ಕಾರಿ ನೌಕರವರು ನನಗೆ ಮಾಹಿತಿ ನೀಡಿದ್ದು, ಸದರಿ ಮಾಹಿತಿ ಪತ್ರದಲ್ಲಿ ಹಳ್ಳ, ರಸ್ತೆ, ರಾಜಕಾಲುವೆ, ಪಾರ್ಕ್ ಮತ್ತು ಶಾಲೆ ಮೈದಾನವನ್ನು ಗುರುತು ಮಾಡಲು ನಕಾಶೆ ಇರುವುದಿಲ್ಲವೆಂದು ತಿಳಿಸಿದ್ದು, ಯಾರು ಮತ್ತು ಎಷ್ಟು ಜಾಗವನ್ನು ಅತಿಕ್ರಮಿಸಿಕೊಂಡಿರುತ್ತಾರೆಂದು ಗುರುತಿಸಲು ಕಷ್ಟವಾಗುತ್ತದೆ ಎಂದು ತಿಳಿಸಿದ್ದರು".

" ದಿನಾಂಕ 12/07/2017 ರಂದು ಆ.ಸ.ನೌ ರವರಿಂದ ಒಂದು ಪತ್ರ ಬಂದಿದ್ದು, ರಿ.ಸ.ನಂ. 61 ಎಂ.ಆರ್. ನಗರದ ನವೇಶನದ ಹಂಚಿಕೆಯಾಗಿರುವ ಬಗ್ಗೆ ಯಾವುದೇ ನಕಾಶೆಯಾಗಲಿ ಅಥವಾ ದಾಖಲೆಯಾಗಲೀ ಲಭ್ಯವಿರುವುದಿಲ್ಲವೆಂದು ವರದಿ ನೀಡಿರುತ್ತಾರೆ".

" ನಿ.ಪಿ–8 ರಲ್ಲಿ ದಿನಾಂಕ 28/07/2017 ರಂದು ಸಂಜೆ 4–30 ರಿಂದ 6–00 ಗಂಟೆಯವರೆಗೆ ಎಂ.ಆರ್. ನಗರದ ಶಾಲೆ, ಬಾವಿ, ದೇವಸ್ಥಾನದ ಹಾಗೂ ಹಳ್ಳ ಸ್ಥಳಗಳನ್ನು ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗದ ಶ್ರೀ ಮಂಜುನಾಥ್, ಕಿರಿಯ ಇಂಜಿನಿಯರ್ ರವರು ಅಳತೆ ಮಾಡಿದಾಗ, ಶ್ರೀಮತಿ ಪ್ರೇಮಕ್ಕ ಬಿನ್ ರಾಮಪ್ಪ, ಚಂಟಿ ಏಸ್.ಆರ್. ಕರಿಯಪ್ಪ ಬಿನ್ ರುದ್ರಪ್ಪ ರವರು ಶಾಲೆ ಮೈದಾನದ ಪೂರ್ವ ದಿಕ್ಕಿನ ಮನೆಯ ಹಿಂದೆ ಕಟ್ಟಿರುವ ಗೋಡೆಯು ಅತಿಕ್ರಮವಾಗಿರುವುದು ಕಂಡು ಬಂದಿರುತ್ತದೆ ಎಂದು ವರದಿ ನೀಡಿರುತ್ತಾರೆ".

" ಅಲ್ಲದೆ, ಶ್ರೀಮತಿ ಶಕೀಲಾ ಕೋಂ ಕಲಂಧರ ಸಾಬ್ ರವರು ದೇವಸ್ಥಾನದ ಪಕ್ಕದಲ್ಲಿ ಕಟ್ಟಿರುವ ಮನೆಯು ಅತಿಕ್ರಮವಾಗಿರುವುದು ಕಂಡುಬಂದಿರುತ್ತದೆಂದು ವರದಿ ನೀಡಿರುತ್ತಾರೆ ಹಾಗೂ ತೆರವು ಮಾಡಲು ಆ.ಸ.ನೌ ರವರಿಗೆ ಕಾಲಾವಕಾಶ ಕೇಳಿಕೊಂಡಿರುವುದಾಗಿ ನಿ.ಪಿ–8 ವರದಿಯಲ್ಲಿ ಹೇಳಿರುತ್ತಾರೆ. ಶ್ರೀಮತಿ ಶಕೀಲಾ ಕೊಂ ಕಲಂಧರ ಸಾಬ್ ರವರ ಕಟ್ಟಡದ ಬಗ್ಗೆ ದಾಖಲೆಗಳನ್ನು ಹಾಜರ್‌ಪಡಿಸಲು ನೋಟಿಸ್ ನೀಡಿರುವುದಾಗಿ, ಅದರಂತೆ ಅವರು ಕಟ್ಟಡಕ್ಕೆ ಸಂಬಂಧಪಟ್ಟ ರಸೀದಿ, ಕಟ್ಟಡದ ನಕಲು ಪ್ರತಿ ನೀಡಿರುತ್ತಾರೆ ಮತ್ತು ಹಕ್ಕುಪತ್ರ ಮತ್ತು ಸಂಬಂಧಪಟ್ಟ ದಾಖಲೆಗಳನ್ನು ನೀಡಿರುವುದಿಲ್ಲವೆಂದು ನಿ.ಪಿ–8 ರ ವರದಿಯಲ್ಲಿ ಹೇಳಿರುತ್ತಾರೆ. 2011ನೇ ಸಾಲಿನಲ್ಲಿ ಆಪಾದಿತ ಸರ್ಕಾರಿ ನೌಕರವರಾದ ಶ್ರೀ ಸಯ್ಯದ್ ಸಮೀವುಲ್ಲಾರವರು ಸದರಿ ಪಂಚಾಯತಿಯ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿರುವುದಾಗಿ ನಿ.ಪಿ–8 ವರದಿಯಲ್ಲಿ ಹೇಳಿರುತ್ತಾರೆ ".

15) ಈ ರೀತಿ ತನಿಖಾದಿಕಾರಿ ನುಡಿದಿರುವ ಸಾಕ್ಷ್ಯವನ್ನು ಪರಿಶೀಲಿಸಿದಾಗ ಶ್ರೀಮತಿ ಪ್ರೇಮಕ್ಕ ಕೋಂ ರಾಮಪ್ಪ ರವರು ಅವರ ಮನೆಯ ಹಿಂಭಾಗದಲ್ಲಿ ಅಂದರೆ ಪಶ್ಚಿಮ ಬಾಗಕ್ಕೆ ಇರುವ ಶಾಲಾ ಅವರಣದ ಜಾಗವನ್ನು ಅತಿಕ್ರಮಿಸಿಕೊಂಡಿರುವ ಬಗ್ಗೆ ಸ್ಪಷ್ಟವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅಲ್ಲದೆ, ಶ್ರೀಮತಿ ಶಕೀಲಾ ಕೋಂ ಕಲಂದರ್ ಸಾಬ್ ರವರು ದೇವಸ್ಥಾನದ ಪಕ್ಕದಲ್ಲಿ ಕಟ್ಟಿರುವ ಮನೆಯು ಅತಿಕ್ರಮ ಕಟ್ಟಡವಿದ್ದಿರುತ್ತದೆಂಬುದು ಕಂಡುಬರುತ್ತದೆ. ಅಲ್ಲದೆ, ಆ ಸಂದರ್ಭದಲ್ಲಿ ಈ ಆ.ಸ.ನೌ ರವರೇ ಸದರಿ ಪಂಚಾಯತಿಯ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿರುತ್ತಾರೆಂಬುದು ಕಂಡುಬರುತ್ತದೆ. ಹಾಗೂ ಈ ತನಿಖಾಧಿಕಾರಿಯು ತನಿಖೆ ಮಾಡಿ ನಿ.ಪಿ–11 ರಂತೆ ವರದಿ ಸಲ್ಲಿಸಿರುತ್ತಾರೆ. ನಿ.ಪಿ–11 ವರದಿಯಲ್ಲಿ ಹೇಳಿರುವುದನ್ನು ಪರಿಶೀಲಿಸಿದಾಗ ದೋಷಾರೋಪಣೆಯಲ್ಲಿ ಕಾಣಿಸಿರುವಂತೆ ಶ್ರೀಮತಿ ಪ್ರೇಮಕ್ಕ ಕೋಂ ರಾಮಣ್ಣ, ಜಂಟಿ ಎಸ್.ಅರ್. ಕರಿಯಪ್ಪ ಬಿನ್ ರುದ್ರಪ್ಪ ರವರು ತಮ್ಮ ಮನೆಯ ಹಿಂಭಾಗದಲ್ಲಿ ಅಂದರೆ, ಮನೆಯ ಪಶ್ಚಿಮ ಭಾಗಕ್ಕೆ ಇರುವ ಶಾಲಾ ಅವರಣವನ್ನು ಒತ್ತುವರಿ ಮಾಡಿಕೊಂಡಿರುತ್ತಾರೆಂದು ಅಭಿಪ್ರಾಯಿಸಿರುತ್ತಾರೆ. ಅದೇ ಪ್ರಕಾರ ಡಬ್ಬ ಅಂಗಡಿ ಮುರುಗೇಶಪ್ಪ ಬಿನ್ ಬೋರಯ್ಯ ರವರು ಸರ್ಕಾರಿ ಶಾಲೆಯ ಜಾಗದಲ್ಲಿ ತಮ್ಮ ಡಬ್ಬ ಅಂಗಡಿಯನ್ನು ಅತಿಕ್ರಮಿಸಿ ಇಟ್ಟುಕೊಂಡಿರುವುದಾಗಿ ಹಾಗೂ ಶ್ರೀಮತಿ ಶಕೀಲಾ ಕೊಂ ಕಲಂದರ್‌ಸಾಬ್ ರವರಿಗೆ ಈ ಆ.ಸ.ನೌ ರವರು ದೇವಸ್ಥಾನದ ಅವರಣ ಜಾಗವನ್ನು ಖಾತೆ ನಂ. 144/580 ಪಿ ರಲ್ಲಿ ಖಾತೆ ಮಾಡಿಕೊಟ್ಟಿರುವುದನ್ನು ಹಾಗೂ ಆ ಜಾಗದಲ್ಲಿ ಶ್ರೀಮತಿ ಶಕೀಲಾ ಕೋಂ ಕಲಂದರಸಾಬ್ ರವರು ಮನೆ ನಿರ್ಮಿಸಿಕೊಂಡು ವಾಸ ಮಾಡುತ್ತಿರುವುದಾಗಿ, ಆ ಬಗ್ಗೆ ಖಾತೆ ಮಾಡಿಕೊಡುವ ಪೂರ್ವದಲ್ಲಿ ಆದ ಸಭಾ ನಡಾವಳಿಗಳಾಗಲೀ, ಹಕ್ಕು ಪತ್ರವಾಗಲೀ, ಪರವಾನಗಿಯಾಗಲೀ ಗ್ರಾಮ ಪಂಚಾಯತಿಯಲ್ಲಿ ಲಭ್ಯವಿರುವುದಿಲ್ಲವೆಂದು ಹಾಗೂ ಶ್ರೀಮತಿ ಶಕೀಲಾ ರವರು ಸಹ ಹಾಜರ್‌ಪಡಿಸಿರುವುದಿಲ್ಲವೆಂದು ಪಿಡಿಓ ರವರು ವರದಿ ನೀಡಿರುತ್ತಾರೆಂದು ನಿ.ಪಿ–11 ವರದಿಯಲ್ಲಿ ಉಲ್ಲೇಖಿಸಿರುತ್ತಾರೆ.

16) ಈ ರೀತಿ ತನಿಖಾಧಿಕಾರಿಯು ತನ್ನ ಮೌಖಿಕ ಸಾಕ್ಷ್ಯದಲ್ಲಿ ಮತ್ತು ನಿ.ಪಿ–11 ತನಿಖಾ ವರದಿಯಲ್ಲಿ ಹೇಳಿರುವುದನ್ನು ಪರಿಶೀಲಿಸಿದಾಗ, ಈ ಆ.ಸ.ನೌ ರವರು ಪಂಚಾಯತಿ ಕಾರ್ಯದರ್ಶಿಯಾಗಿದ್ದಾಗ ದೇವಸ್ಥಾನಕ್ಕೆ ಸೇರಿದ ಜಾಗದಲ್ಲಿ ಶ್ರೀಮತಿ ಶಕೀಲಾ ರವರಿಗೆ ಖಾತೆ ಸಂಖ್ಯೆ 144/580 ಪಿ ಎಂದು

ಕಾನೂನುಬಾಹಿರವಾಗಿ ಖಾತೆ ಮಾಡಿಕೊಟ್ಟಿರುವುದಲ್ಲದೆ, ಮನೆ ಕಟ್ಟಿಕೊಳ್ಳಲು ಸಹ ಅನುಮತಿಸಿರುತ್ತಾರೆಂಬುದು ಕಂಡುಬರುತ್ತದೆ. ಅದೇ ಪ್ರಕಾರ ಶ್ರೀಮತಿ ಪ್ರೇಮಕ್ಕ ಕೋಂ ರಾಮಪ್ಪ ರವರು ತಮ್ಮ ಮನೆಯ ಹಿಂಬಾಗದಲ್ಲಿ ಪಶ್ಚಿಮ ಬಾಗಕ್ಕೆ ಇರುವ ಶಾಲಾ ಅವರಣವನ್ನು ಒತ್ತುವರಿ ಮಾಡಿಕೊಂಡಿದ್ದರೂ ಸಹ ಈ ಆ.ಸ.ನೌ ರವರು ಯಾವುದೇ ಕ್ರಮ ಜರುಗಿಸಿರುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಅದೇ ಪ್ರಕಾರ ಡಬ್ಬ ಅಂಗಡಿಯ ಮುರಗೇಶಪ್ಪ ರವರು ಸರ್ಕಾರಿ ಶಾಲಾ ಜಾಗದಲ್ಲಿ ಅತಿಕ್ರಮಿಸಿ ಅಂಗಡಿಯನ್ನಿಟ್ಟುಕೊಂಡಿದ್ದರೂ ಸಹ ಯಾವುದೇ ಕ್ರಮ ಜರುಗಿಸಿರುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ, ಶ್ರೀಮತಿ ಶಕೀಲಾ ರವರ ಖಾತಾ ಬದಲಾವಣೆಗೆ ಸಂಬಂಧಿಸಿದಂತೆ ಸಭಾ ನಡಾವಳಿಯಾಗಲೀ, ಹಕ್ಕುಪತ್ರವಾಗಲೀ ಹಾಗೂ ಪರವಾನಗಿಗಳನ್ನು ನಿರ್ವಹಿಸದ ಬಗ್ಗೆ ಕಛೇರಿಯಲ್ಲಿ ದಾಖಲೆಗಳನ್ನು ಕಾಯ್ದಿಟ್ಟಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ.

17) ಪಿಡಬ್ಲ್ಯೂ-3 **ಶ್ರೀ ವಿರೂಪಾಕ್ಷ ಒಡೆಯರ್, ನಿವೃತ್ತ ಪ್ರಭಾರ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹೆಚ್ಚುವರಿ ಸಾಕ್ಷಿರವರ** ಮುಖ್ಯ ವಿಚಾರಣೆಯಲ್ಲಿ, ತಾನು 2016-17 ನೇ ಸಾಲಿನಲ್ಲಿ ಎಂ.ಕೆ. ಹಟ್ಟಿ ಗ್ರಾಮಪಂಚಾಯತಿ, ಚಿತ್ರದುರ್ಗ ತಾಲ್ಲೂಕಿನಲ್ಲಿ ಪ್ರಭಾರಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದು, ಎಂ.ಕೆ. ಹಟ್ಟಿ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿನ ಎಂ.ಆರ್. ನಗರದ ರಿ. ಸರ್ವೆ ನಂ. 61 ರಲ್ಲಿ ಹೊಸದಾಗಿ, ಎಂ.ಆರ್. ನಗರ ಎಂದು ಬಡಾವಣೆ ನಿರ್ಮಾಣವಾಗಿದ್ದು, ಸದರಿ ಪ್ರದೇಶದಲ್ಲಿ ಒತ್ತುವರಿ ಪ್ರದೇಶವನ್ನು ಗುರುತಿಸಲು ಸ್ಥಳ ತನಿಖೆ ಮಾಡಿರುವುದಾಗಿ, ಆ.ಸ.ನೌ ರವರು ದಿನಾಂಕ 19/05/2011 ರಂದು ಕಾರ್ಯದರ್ಶಿಯಾಗಿ ಕರ್ತವ್ಯದಲ್ಲಿದ್ದಾಗ ಎಂ.ಕೆ. ಹಟ್ಟಿ ಗ್ರಾಮಪಂಚಾಯತಿಯಲ್ಲಿರುವ ಕ್ರಮಸಂಖ್ಯೆ 1118 ಖಾತೆ ನಂ. 144/580 ಪಿ ರಲ್ಲಿ ಖಾತೆ ಮಾಡಿರುತ್ತಾರೆಂದು ಹಾಗೂ ದಿನಾಂಕ 10/03/2012 ರಂದು 1118/144/580 ಪಿ ರಲ್ಲಿ ಮನೆ ಕಟ್ಟಲು ಪರವಾನಗಿ ನೀಡಿರುತ್ತಾರೆಂದು ನುಡಿದಿರುತ್ತಾರೆ. ಅಲ್ಲದೆ, ಸದರಿ ನಿವೇಶನವನ್ನು ಶ್ರೀಮತಿ ಶಕೀಲಾ ಕೋಂ ಕಲಂದರ್ ರವರಿಗೆ ಹಂಚಿಕೆ ಮಾಡಿರುವ ಬಗ್ಗೆ ಸಭಾ ನಡಾವಳಿ, ಇ.ಟಿ.ಸಿ. ದಾಖಲೆ ಲಭ್ಯವಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ಶಕೀಲಾ ರವರಿಗೆ ನೋಟಿಸ್ ನೀಡಿದ್ದಾಗ್ಯೂ ಯಾವುದೇ ಹಕ್ಕುಪತ್ರ ಇತ್ಯಾದಿ ದಾಖಲೆಗಳನ್ನು ಹಾಜರ್‌ಪಡಿಸಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ.

**ಶ್ರೀ ವಿರೂಪಾಕ್ಷ ಒಡೆಯರ್** ರವರ ಮುಂದುವರೆದ ಸಾಕ್ಷ್ಯದಲ್ಲಿ, ಶ್ರೀಮತಿ ಪ್ರೇಮಕ್ಕ ಕೋಂ ರಾಮಣ್ಣ ಜಂಟಿ ಎಸ್.ಆರ್. ಕರಿಯಪ್ಪ ಬಿನ್ ರುದ್ರಪ್ಪ ಶಾಲಾ ಮೈದಾನದ ಡಬ್ಬ ಅಂಗಡಿ ಮುರಗೇಶಪ್ಪ ಬಿನ್ ಬೋರಯ್ಯ ಶಕೀಲಾ ಕೋಂ ಖಲಂಧರ್ ರವರುಗಳು ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದು, ಈ ಅತಿಕ್ರಮ ತೆರವುಗೊಳಿಸಲು ಈಗಾಗಲೇ ನೋಟಿಸ್ ಜಾರಿ ಮಾಡಿ ಕಾಲಾವಕಾಶ ನೀಡಲಾಗಿರುತ್ತದೆಂದು ನುಡಿದಿರುತ್ತಾರೆ. ಸದರಿ ಮಾಹಿತಿಯಂತೆ ತೆರವುಗೊಳಿಸದಿದ್ದಲ್ಲಿ ಮೇಲಾಧಿಕಾರಿಗಳ ಗಮನಕ್ಕೆ ತಂದು ಮುಂದಿನ ಕ್ರಮಜರುಗಿಸಲಾಗುವುದೆಂದು ಲೋಕಾಯುಕ್ತ ಪೊಲೀಸ್ ನಿರೀಕ್ಷಕರು, ಚಿತ್ರದುರ್ಗರವರಿಗೆ ಪತ್ರ ಬರೆದಿರುವುದಾಗಿ ಹಾಗೂ ಅದರ ಜೊತೆಗೆ ನೋಟಿಸ್ ನೀಡಿರುವ ದಾಖಲೆಗಳನ್ನು ಲಗತ್ತಿಸಿ ಕಳುಹಿಸಿರುವುದಾಗಿ ನುಡಿದಿರುತ್ತಾರೆ. ಸದರಿ ಪತ್ರವನ್ನು **ನಿ.ಪಿ–12** ಎಂದು, ಮತ್ತು ನೋಟಿಸಿನ ಪ್ರತಿಯನ್ನು ನಿ.ಪಿ–13 ಎಂದು ಗುರುತಿಸಿರುತ್ತಾರೆ. ಶ್ರೀಮತಿ ಶಕೀಲಾ ರವರಿಗೆ ಆ.ಸ.ನೌ ರವರು ಖಾತೆ ಮಾಡಿದ ಬಗ್ಗೆ ನೀಡಿದ ಸಾಮಾನ್ಯ ರಸೀತಿಯ ದೃಢಿಕೃತ ಪ್ರತಿಯನ್ನು **ನಿ.ಪಿ–14** ಎಂದು, ಶ್ರೀಮತಿ ಶಕೀಲಾ ರವರಿಗೆ ಮನೆ ಕಟ್ಟಲು ತೆರಿಗೆ ಪಡೆದ ಬಗ್ಗೆ ನೀಡಿದ ಸಾಮಾನ್ಯ ರಸೀತಿಯ ದೃಢಿಕೃತ ಪ್ರತಿಯನ್ನು **ನಿ.ಪಿ–15** ಎಂದು, ಶ್ರೀಮತಿ ಶಕೀಲಾ ರವರಿಗೆ ಮನೆ ಕಟ್ಟಲು ನೀಡಿದ ಪರವಾನಿಗೆ ಪತ್ರದ ದೃಢಿಕೃತ ಪ್ರತಿಯನ್ನು **ನಿ.ಪಿ–16** ಎಂದು ಗುರುತಿಸಿರುತ್ತಾರೆ. ಈ ದಾಖಲೆಯನ್ನು ಪರಿಶೀಲಿಸಿದಾಗ ಈ ಆ.ಸ.ನೌ ರವರು ದಿನಾಂಕ 10.03.2012 ರಂದು ಶ್ರೀಮತಿ ಶಕೀಲಾ ಕೋಂ ಕಲಂದರ್‌ಸಾಬ್ ರವರಿಗೆ ಮನೆ ಕಟ್ಟಲು ಪರವಾನಗಿ ನೀಡಿರುವುದು ರುಜುವಾತಾಗುತ್ತದೆ.

ಮುಂದುವರೆದು, ಶ್ರೀ ಮುರುಗೇಶ್ ಬಿನ್ ಬೋರಯ್ಯ ರವರಿಗೆ ನೀಡಿದ ನೋಟಿಸಿನ ದೃಢಿಕೃತ ಪ್ರತಿಯನ್ನು **ನಿ.ಪಿ–18** ಎಂದು, ಶ್ರೀಮತಿ ಪ್ರೇಮಕ್ಕ ಬಿನ್ ರಾಮಪ್ಪ ಜಂಟಿ ಎಸ್.ಆರ್. ಕರಿಯಪ್ಪ ಬಿನ್ ರುದ್ರಪ್ಪ ರವರಿಗೆ ನೀಡಿದ ನೋಟಿಸಿನ ದೃಢಿಕೃತ ಪ್ರತಿಯನ್ನು **ನಿ.ಪಿ–19** ಎಂದು ಗುರುತಿಸಿರುತ್ತಾರೆ. ಸದರಿ ನೋಟಿಸ್‌ಗಳನ್ನು ಪರಿಶೀಲಿಸಿದಾಗ ಅಕ್ರಮವಾಗಿ ನಿರ್ಮಿಸಿಕೊಂಡಿರುವ ಕಟ್ಟಡ ಮತ್ತು ಡಬ್ಬ ಅಂಗಡಿಯನ್ನು ತೆರವುಗೊಳಿಸಲು ಪಿಡಿಓ ರವರು ನೋಟಿಸ್ ನೀಡಿರುವುದು ಕಂಡುಬರುತ್ತದೆ. ತಾನು ಈ ಬಗ್ಗೆ ನಿ.ಪಿ–7 ಮತ್ತು ನಿ.ಪಿ–8 ರಂತೆ

ಲೋಕಾಯುಕ್ತ ಪೊಲೀಸ್‌ರಿಗೆ ಪತ್ರ ಬರೆದಿದ್ದು, ಸರ್ವೆ ನಂ. 61 ರಲ್ಲಿ ಪ್ರೇಮಕ್ಕ ಬಿನ್ ರಾಮಪ್ಪ, ಜಂಟಿ ಎಸ್.ಆರ್. ಕರಿಯಪ್ಪ ಬಿನ್ ರುದ್ರಪ್ಪ ಶಕೀಲಾ ಕೋಂ ಖಲಂದರ್, ಡಬ್ಬ ಅಂಗಡಿ ಮುರುಗೇಶಪ್ಪ ರವರುಗಳು ಅತಿಕ್ರಮಿಸಿಕೊಂಡಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ.

18) ಈ ರೀತಿ ಮಂಡನಾಧಿಕಾರಿಗಳು ದೂರುದಾರರು, ತನಿಖಾಧಿಕಾರಿ, ಸದರಿ ಗ್ರಾಮಪಂಚಾಯತಿ ಪಿಡಿಓ ರವರ ಸಾಕ್ಷ್ಯವನ್ನು ನುಡಿಸಿಕೊಂಡಿದ್ದು, ಇವರುಗಳ ಸಾಕ್ಷ್ಯವು ಈ ಆ.ಸ.ನೌ ರವರು ಸರ್ಕಾರಿ ಜಾಗದ ಅತಿಕ್ರಮಣ ಇದ್ದಾಗಿಯೂ ಯಾವುದೇ ಕ್ರಮ ಜರುಗಿಸದೆ ನಿರ್ಲಕ್ಷ ತೋರಿ ದುರ್ನಡತೆ ಎಸಗಿರುವುದು ರುಜುವಾತಾಗುತ್ತದೆ.

19) **ವಿಚಾರಣೆಯ ಮಧ್ಯಂತರದಲ್ಲಿ ಈ ಆ.ಸ.ನೌ ರವರು ಗೈರುಹಾಜರಾಗಿದ್ದರಿಂದ ಏಕತರ್ಫಿ ಎಂದು ನಿರ್ಣಯಿಸಲಾಗಿರುತ್ತದೆ. ಶಿಸ್ತು ಪ್ರಾಧಿಕಾರವು ನೀಡಿರುವ ಸಾಕ್ಷ್ಯವನ್ನು ಅಲ್ಲಗಳೆಯಲು ಈ ಆ.ಸ.ನೌ ರವರು ಯಾವುದೇ ಸಾಕ್ಷ್ಯವನ್ನು ನೀಡಿರುವುದಿಲ್ಲ.**

20) ಈ ಎಲ್ಲಾ ಕಾರಣಗಳಿಂದ ಶಿಸ್ತು ಪ್ರಾಧಿಕಾರದವರು ಆ.ಸ.ನೌ. ರವರ ವಿರುದ್ಧ ಹೊರಿಸಲಾದ ಆಪಾದನೆ ದುರ್ನಡತೆ ಮತ್ತು ಕರ್ತವ್ಯಲೋಪಗಳನ್ನು ರುಜುವಾತುಪಡಿಸುವಲ್ಲಿ ಯಶಸ್ವಿಯಾಗಿರುತ್ತಾರೆಂದು ನಿರ್ಣಯಿಸಲಾಗಿದೆ. ಅಲ್ಲದೇ, ಶಿಸ್ತು ಪ್ರಾಧಿಕಾರದವರು ನೀಡಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳು ಆ.ಸ.ನೌ. ರವರು ದುರ್ನಡತೆ ತೋರಿ ಕರ್ತವ್ಯಲೋಪ ಎಸಗಿರುವ ಹೆಚ್ಚಿನ ಸಂಭವನೀಯತೆ ಕಂಡು ಬರುತ್ತದೆ. ಈ ಎಲ್ಲಾ ಕಾರಣಗಳಿಂದ ಅಂಶ 1 ಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

**ಅಂಶ-2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.**

**ಆದೇಶ**

ಶಿಸ್ತು ಪ್ರಾಧಿಕಾರದವರು ಆ.ಸ.ನೌ ಆ.ಸ.ನೌ **ಶ್ರೀ ಸಮಿವುಲ್ಲಾ,** ಹಿಂದಿನ ಕಾರ್ಯದರ್ಶಿ, ಮಠದ ಕುರುಬಹಟ್ಟಿ ಗ್ರಾಮ ಪಂಚಾಯತಿ, ಚಿತ್ರದುರ್ಗ ತಾಲ್ಲೂಕು,ಚಿತ್ರದುರ್ಗ ಜಿಲ್ಲೆ (ಪ್ರಸ್ತುತ ಗ್ರೇಡ್-2 ಕಾರ್ಯದರ್ಶಿ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ) ರವರ ವಿರುದ್ಧ ಹೊರಿಸಲಾದ ಆರೋಪವನ್ನು **ರುಜುವಾತುಪಡಿಸಲಾಗಿದೆ** ಎಂದು ನಿರ್ಣಯಿಸಲಾಗಿದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ-2 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

(ಸೆಲ್ವಕುಮಾರ್.ಸಿ)
ಅಪರ ನಿಬಂಧಕರು ವಿಚಾರಣೆಗಳು-16,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

ಬೆಂಗಳೂರು
ದಿನಾಂಕ 09/02/2021